## ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ವಿದ್ಯುತ್ ಹೊಸ ಸಂಪರ್ಕ, ನೋಂದಾಯಿತ ಗ್ರಾಹಕರ ಹೆಸರು ಬದಲಾವಣೆ, ಸ್ಥಾವರದ ಜಕಾತಿ ಬದಲಾವಣೆ, ಹೊರೆ ಕಡಿಮೆಗೊಳಿಸುವಿಕೆ, ಬಾಕಿ ಇರುವ ಅರ್ಜಿಗಳ ಹಾಗೂ ವಿದ್ಯುತ್ ಬಿಲ್ ಕುರಿತಾದ ದೂರುಗಳ ಇತ್ಯರ್ಥ ಹಾಗೂ ಇತರೆ ವಿದ್ಯುತ್ ಸಮಸ್ಯೆಗಳ ಮತ್ತು ಗ್ರಾಹಕರ ಕುಂದು ಕೊರತೆಗಳನ್ನು ಕುರಿತು ಚರ್ಚಿಸಿ, ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ದಿನಾಂಕ: 16.12.2021 ರಂದು ಬೆಳಿಗ್ಗೆ 11:00ಕ್ಕೆ ಕಾರ್ಯ ಮತ್ತು ಪಾಲನಾ ಉಪ ವಿಭಾಗ, ಗು.ವಿ.ಸ.ಕಂ.ನಿ., ಮುನಿರಾಬಾದ್‌ನಲ್ಲಿ **ಅದಾಲತ್ ಹಾಗೂ ಗ್ರಾಹಕರ ಸಂವಾದ ಸಭೆಯನ್ನು** ಶ್ರೀ ಎಮ್.ಎಸ್ ಪತ್ತಾರ್, ಕಾರ್ಯನಿರ್ವಾಹಕ ಅಭಿಯಂತರರು(ವಿ)., ಕಾರ್ಯ ಮತ್ತು ಪಾಲನಾ ವಿಭಾಗ, ಗು.ವಿ.ಸ.ಕಂ.ನಿ., ಕೊಪ್ಪಳ ರವರ ನೇತೃತ್ವದಲ್ಲಿ ಏರ್ಪಡಿಸಲಾದ ಸಭೆಯ ನಡವಳಿಗಳು.

**ಉಪಸ್ಥಿತರು: ಹಾಜರಿಯ ವಹಿಯಂತೆ:**

01. ಶ್ರೀ ಮೈಬುಸಾಬ್, ಸಾ|| ಹೊಸಲಿಂಗಾಪುರ
02. ಶ್ರೀ ಮಾಬುಸುಭಾನಿ, ಸಾ|| ಹೊಸಲಿಂಗಾಪುರ
03. ಶ್ರೀ ಫಕೀರಪ್ಪ, ಸಾ|| ಹೊಸಲಿಂಗಾಪುರ
04. ಶ್ರೀ ಶಬ್ಬೀರ್ ಅಹಮ್ಮದ್, ಸಾ|| ಹೊಸಲಿಂಗಾಪುರ
05. ಶ್ರೀ ಸಯ್ಯದ್ ಖಾಸಿಂ, ಸಾ|| ಹೊಸಲಿಂಗಾಪುರ
06. ಶ್ರೀ ಬಾಲೇಶ, ಸಾ|| ಹೊಸಲಿಂಗಾಪುರ
07. ಶ್ರೀ ಪವನ್ ದೇಸಾಯಿ, ಸಾ|| ಹೊಸಲಿಂಗಾಪುರ
08. ಶ್ರೀ ಯಮನೂರಪ್ಪ, ಸಾ|| ಹೊಸಲಿಂಗಾಪುರ
09. ಶ್ರೀ ಗವಿಸಿದ್ದಪ್ಪ, ಸಾ|| ಹಿರೇಬಗನಾಳ
10. ಶ್ರೀ ಕರಿಯಪ್ಪ, ಸಾ|| ಹಿರೇಬಗನಾಳ
11. ಶ್ರೀ ಬದ್ದೆಪ್ಪ ಲಮಾಣಿ, ಸಾ|| ಹಿರೇಬಗನಾಳ
12. ಶ್ರೀ ಜಿ.ಬಿ ಸರ್ದಾರ್, ಸಾ|| ಹಿರೇಬಗನಾಳ
13. ಶ್ರೀ ಫಕೀರಪ್ಪ ಮಲ್ಲಪ್ಪ ಗಡ್ಡಿ, ಸಾ|| ಹಿರೇಬಗನಾಳ
14. ಶ್ರೀ ಬಸಣ್ಣ ಪೆದ್ಲ, ಸಾ|| ಬೂದುಗುಂಪಾ
15. ಶ್ರೀ ಸಿದ್ದಪ್ಪ, ಸಾ|| ಬೂದುಗುಂಪಾ
16. ಶ್ರೀ ದೇವಪ್ಪ ಮನ್ನಾಪುರ, ಸಾ|| ಬೂದುಗುಂಪಾ
17. ಶ್ರೀ ಬಸವರಾಜ ಜಬ್ಬಲಗುಡ್ಡ, ಸಾ|| ಬೂದುಗುಂಪಾ

**ಸಭೆಗೆ ಹಾಜರಾದ ಅಧಿಕಾರಿ/ನೌಕರರು:**

01. ಶ್ರೀ ಎಮ್.ಎಸ್ ಪತ್ತಾರ್, ಕಾರ್ಯನಿರ್ವಾಹಕ ಅಭಿಯಂತರರು(ವಿ).,
02. ಶ್ರೀ ಅವಿನಾಶ ಎಚ್., ಸಹಾಯಕ ಅಭಿಯಂತರರು(ವಿ).,
03. ಶ್ರೀ ಮೌಲಾಸಾಬ್, ಕಿರಿಯ ಅಭಿಯಂತರರು(ವಿ).,
04. ಶ್ರೀ ಎಮ್. ಮುನಿಸ್ವಾಮಿ, ಪ್ರಭಾರಿ ಶಾಖಾಧಿಕಾರಿ
05. ಶ್ರೀ ಮೊಹಮ್ಮದ್ ರಫೀಕ್, ಹಿರಿಯ ಸಹಾಯಕ
06. ಶ್ರೀ ಕುಮಾರ, ಮೇಲ್ವಿಚಾರಕ
07. ಶ್ರೀ ಚಂದ್ರಶೇಖರ ಫಣಿ, ಸಹಾಯಕ
08. ಶ್ರೀ ನಾಗರಾಜ ರಾಟಿ., ಸಹಾಯಕ

ಶ್ರೀ ಎಮ್.ಎಸ್ ಪತ್ತಾರ್, ಕಾರ್ಯನಿರ್ವಾಹಕ ಅಭಿಯಂತರರು(ವಿ)., ಕಾರ್ಯ ಮತ್ತು ಪಾಲನಾ ವಿಭಾಗ, ಗು.ವಿ.ಸ.ಕಂ.ನಿ., ಕೊಪ್ಪಳ ರವರು ಸಭೆಯಲ್ಲಿ ಹಾಜರಾಗಿದ್ದ ಗ್ರಾಹಕರು ಹಾಗೂ ಅಧಿಕಾರಿ / ನೌಕರರನ್ನು ಸಭೆಗೆ ಸ್ವಾಗತಿಸಿದರು. ವಿದ್ಯುತ್‌ಗೆ ಸಂಬಂಧಿತ ಸಮಸ್ಯೆಗಳ ಮತ್ತು ಗ್ರಾಹಕರ ಕುಂದು ಕೊರತೆಗಳನ್ನು ಕುರಿತು ಚರ್ಚಿಸಿ, ಸದರಿ ಸಭೆಯಲ್ಲಿ ಗ್ರಾಹಕರು ವಿದ್ಯುತ್‌ಗೆ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ತಿಳಿಸುತ್ತಾ, ಸಭೆಯ ಉದ್ದೇಶದ ಕುರಿತಾಗಿ ಸಭೆಯಲ್ಲಿ ವಿವರಿಸುತ್ತಾ, ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

**ಸಭೆಯಲ್ಲಿ ಚರ್ಚಿಸಿದ ವಿಷಯಗಳು:**

01. ಹೊಸಲಿಂಗಾಪುರ ಗ್ರಾಮದ ಮಧ್ಯ ಭಾಗದಲ್ಲಿ 33 ಕೆ.ವಿ ವಿದ್ಯುತ್ ಮಾರ್ಗವನ್ನು ಹಾದುಹೋಗಿರುತ್ತದೆ. ಸದರಿ ವಿದ್ಯುತ್ ಮಾರ್ಗದ ಕೆಳಕಗಡೆ, ಉರ್ದು ಮದರಸಾ, ಅಂಗನವಾಡಿ ಮತ್ತು ಸುಮಾರು 200 ರಿಂದ 250 ಮನೆಗಳಿರುತ್ತವೆ. ವಿದ್ಯುತ್ ಮಾರ್ಗದ ಕೆಳಗಡೆ ಗಿಡಗಂಟೆಗಳು ಸಹ ಬೆಳೆದು, ಮಾರ್ಗಕ್ಕೆ ತಾಗಿ ವಿದ್ಯುತ್ ಅವಘಡ ಉಂಟಾಗುವ ಸಂಭವವಿರುತ್ತದೆ. ಆದ್ದರಿಂದ ಸದರಿ ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸಿಕೊಡುವಂತೆ ಸಭೆಯಲ್ಲಿ ಹಾಜರಿದ್ದ ಗ್ರಾಮಸ್ಥರು ಮನವಿ ಸಲ್ಲಿಸಿದರು.

    ಆಗ ಸಭಾಧ್ಯಕ್ಷರು, 33 ಕೆ.ವಿ ವಿದ್ಯುತ್ ಮಾರ್ಗದ ನಿರ್ವಹಣೆಯು ನಿರ್ಮಾಣ ಮತ್ತು ನಿರ್ವಹಣಾ ವಿಭಾಗ (C & M) ವ್ಯಾಪ್ತಿಗೆ ಬರುತ್ತದೆ. ಆದ್ದರಿಂದ ಗ್ರಾಮಸ್ಥರು ಸಲ್ಲಿಸಿದ ಮನವಿಯನ್ನು ಸಿ. ಎಂಡ್ ಎಮ್ ವಿಭಾಗ, ಜೆಸ್ಕಾಂ, ಕೊಪ್ಪಳ ರವರಿಗೆ ಕಳುಹಿಸಿ ಕಂಪನಿಯ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

    **(ಕ್ರಮ: ಶಾಖಾಧಿಕಾರಿ, ಶಾಖೆ-1)**

02. ಅಳವಡಿಸಿರುವ ಹೊಸ ಮಾಪಕಗಳಲ್ಲಿ (ಮ್ಯಾಕ್ಸ್‌ವೆಲ್ ಮೀಟರ್), ಕೆಲವು ಮಾಪಕಗಳು ದೋಶಪೂರಿತವಾಗಿರುವುದರಿಂದ, ಹೆಚ್ಚು ಬಳಕೆ (Abnormal consumption) ಬರುತ್ತಿವೆ. ಆದ್ದರಿಂದ ಸದರಿ ಮಾಪಕಗಳನ್ನು ಪರಿಶೀಲಿಸಿ, ಬದಲಿಸಿಕೊಡಬೇಕೆಂದು ಹಿರೇಬಗನಾಳ ಗ್ರಾಮದ ನಿವಾಸಿಗಳು ಮನವಿ ಸಲ್ಲಿಸಿದರು.

    ಸಂಬಂಧಿತ ಶಾಖೆಯ ಶಾಖಾಧಿಕಾರಿ ರವರಿಂದ ದೋಷಪೂರಿತ ಮಾಪಕಗಳ ವಿವರವನ್ನು ಪಡೆದು, ಎಮ್.ಟಿ ಉಪ ವಿಭಾಗದಲ್ಲಿ ಪರೀಕ್ಷಿಸಿ, ವರದಿಯನ್ನು ಪಡೆದು ದೋಷ ಪೂರಿತ ಮಾಪಕಗಳನ್ನು ಕೂಡಲೆ ಬದಲಾಯಿಸಲು ಕ್ರಮ ವಹಿಸುವಂತೆ ಶಾಖಾಧಿಕಾರಿಹಳಿಗೆ ಸೂಚಿಸಲಾಯಿತು.

    **(ಕ್ರಮ: ಸ.ಕಾನಿ.ಅ(ವಿ), ಶಾಖಾಧಿಕಾರಿ, ಶಾಖೆ-1 ಮತ್ತು ಸಹಾಯಕ ಲೆಕ್ಕಾಧಿಕಾರಿ)**

03. ಬೂದುಗುಂಪಾ ಗ್ರಾಮದಲ್ಲಿನ, ಗ್ರಾಮದ ಕುಡಿಯುವ ನೀರಿನ ಮತ್ತು ಕೃಷಿ ಪಂಪ್‌ಸೆಟ್‌ಗಳ ಒತ್ತಡ ಹೆಚ್ಚಾಗಿರುವುದರಿಂದ, ವಿದ್ಯುತ್ ಪರಿವರ್ತಕಗಳು ವಿಫಲವಾಗುತ್ತಿವೆ. ಆದ್ದರಿಂದ ಗ್ರಾಮದ ಕುಡಿಯುವ ನೀರಿನ ಉದ್ದೇಶಕ್ಕಾಗಿ ಮತ್ತು ಕೃಷಿ ಪಂಪ್‌ಸೆಟ್‌ಗಳಿಗೆ ಹೆಚ್ಚುವರಿ ವಿದ್ಯುತ್ ಪರಿವರ್ತಕಗಳನ್ನು ಮಂಜೂರು ಮಾಡುವಂತೆ ಮನವಿ ಸಲ್ಲಿಸಿದರು.

    ಸ್ಥಳ ಪರಿಶೀಲಿಸಿ ನಿಯಮನಾನುಸಾರ ಅಗತ್ಯ ಕ್ರಮ ತೆಗೆದುಕೊಳ್ಳಲು ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು.

    **(ಕ್ರಮ: ಸ.ಕಾ.ನಿ.ಅ(ವಿ), ಶಾಖಾಧಿಕಾರಿ, ಶಾಖೆ-4)**

ಮೇಲ್ಕಾಣಿಸಿದ ಎಲ್ಲಾ ಅಂಶಗಳನ್ನು ಕುರಿತು ಚರ್ಚಿಸಿದ ನಂತರ ಶ್ರೀ ಎಮ್.ಎಸ್ ಪತ್ತಾರ್, ಕಾರ್ಯನಿರ್ವಾಹಕ ಅಭಿಯಂತರರು(ವಿ)., ಕಾರ್ಯ ಮತ್ತು ಪಾಲನಾ ವಿಭಾಗ, ಗು.ವಿ.ಸ.ಕಂ.ನಿ., ಕೊಪ್ಪಳ ರವರು ಸಭೆಯಲ್ಲಿ ಗ್ರಾಹಕರು ಸಲ್ಲಿಸಿರುವ ಮನವಿಗಳನ್ನು / ಸಮಸ್ಯೆಗಳನ್ನು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿದರು. ಸಭೆಯಲ್ಲಿ ಹಾಜರಿದ್ದ ಎಲ್ಲರ ಒಮ್ಮತದೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.



ಕಾರ್ಯನಿರ್ವಾಹಕ ಅಭಿಯಂತರರು(ವಿ).,
ಕಾ. ಮತ್ತು ಪಾ. ವಿಭಾಗ, ಗು.ವಿ.ಸ.ಕಂ.ನಿ.,
ಕೊಪ್ಪಳ.

ಸಂ.: ಸಕಾನಿಅ(ವಿ)/ಸಲೆಅ/ಹಿಸ/ಕ.4/2021–22/ 2144 - 46 ದಿನಾಂಕ: 16.12.2021

<u>ಪ್ರತಿಗಳನ್ನು ಈ ಕೆಳಕಂಡ ಮೇಲಾಧಿಕಾರಿಗಳ ದಯಾಪರ ಅವಗಾಹನೆಗಾಗಿ ಸಲ್ಲಿಸಲಾಗಿದೆ.</u>

1. ಮಾನ್ಯ ಮುಖ್ಯ ಅಭಿಯಂತರರು(ವಿ), ಕಾ.ಮತ್ತು ಪಾ. ವಲಯ, ಗು.ವಿ.ಸ.ಕಂ.ನಿ., ಬಳ್ಳಾರಿ.
2. ಮಾನ್ಯ ಅಧೀಕ್ಷಕ ಅಭಿಯಂತರರು(ವಿ), ಕಾ.ಮತ್ತು ಪಾ. ವೃತ್ತ ಕಛೇರಿ, ಗು.ವಿ.ಸ.ಕಂ.ನಿ., ಕೊಪ್ಪಳ ಕಾರ್ಯಸ್ಥಾನ: ಮುನಿರಾಬಾದ್.
3. ಕಾರ್ಯನಿರ್ವಾಹಕ ಅಭಿಯಂತರರು(ವಿ), ನಿರ್ಮಾಣ ಮತ್ತು ನಿರ್ವಹಣೆ ವಿಭಾಗ, ಗು.ವಿ.ಸ.ಕಂ.ನಿ., ಕೊಪ್ಪಳ ರವರ ಮಾಹಿತಿಗಾಗಿ.
4. ಪ್ರತಿಯನ್ನು ಕಡತಕ್ಕೆ.